# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**4ನೇ ತರಗತಿ** **ಆಗಸ್ಟ್ ಮಾಹೆ** **ಪ್ರಥಮ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆ | ಮೌಲ್ಯಮಾಪನ |
|---|---|---|---|---|
| ೧ | ಆಗಸ್ಟ್ ೧ನೇ ವಾರ | ನಿಯತಕಾಲಿಕೆಯಲ್ಲಿನ ಮಕ್ಕಳ ಕತೆ/ಕವನಗಳ ಸಂಗ್ರಹ ಮಾಡುವರು. | *ಶಿಕ್ಷಕರು ತಾವು ಸಂಗ್ರಹಿಸಿರುವ ನಿಯತಕಾಲಿಕೆಯನ್ನು ಪ್ರದರ್ಶಿಸಿ ಮಕ್ಕಳ ವಿಭಾಗದಲ್ಲಿನ ಮಕ್ಕಳಿಂದ ರಚಿತವಾದ ಕತೆ/ಕವನಗಳನ್ನು ಪರಿಚಯಿಸುವರು ಹಾಗೂ ಓದುವರು.<br><br>*ಮಕ್ಕಳು ಕತೆ/ಕವನಗಳನ್ನು ಆಲಿಸುವರು. | *ನಿಯತಕಾಲಿಕೆಯಲ್ಲಿನ ಮಕ್ಕಳ ಕತೆ/ಕವನಗಳನ್ನು ಸಂಗ್ರಹಿಸುವುದು.<br><br>*ಪರಿಚಿತ ಚಿತ್ರಗಳನ್ನು ನೀಡಿ ಸ್ವತಃ ಪುಟ್ಟ ಕವಿತೆ ಅಥವಾ ಕತೆ ಬರೆಯಲು ತಿಳಿಸುವುದು. |
| ೨ | ಆಗಸ್ಟ್ ೧ನೇ ವಾರ | ಜೋಗುಳ ಪದ್ಯಗಳ ಸಂಗ್ರಹ ಮತ್ತು ಸ್ಥಳೀಯ ಜನಪದ ಹಾಡುಗಳ ಸಂಗ್ರಹ (ಲಾಲಿ ಹಾಡಿಗೆ ಸಂಬಂಧಪಟ್ಟಂತೆ) | *ಸಂಗ್ರಹಿಸಿದ ಅಥವಾ ಹಿರಿಯರಿಂದ ಕೇಳಿ ತಿಳಿದ ಜೋಗುಳ ಪದ ಹಾಗೂ ಜನಪದ ಹಾಡುಗಳನ್ನು ಹಾಡಿಸುವುದು.<br><br>*ಧ್ವನಿ ಮುದ್ರಿಕೆಗಳ ಮೂಲಕ (ರೇಡಿಯೋ), ಹಾಗೂ ವಿಡಿಯೋ ಕ್ಲಿಪ್ಪಿಂಗ್ ಮೂಲಕ ಹಾಡುಗಳನ್ನು ಕೇಳಿಸುವುದು. | * ಕನ್ನಡದ ಕವಿಗಳ ಭಾವಚಿತ್ರ ಸಂಗ್ರಹಿಸುವುದು.<br><br>*ಕವಿಗಳ ಭಾವಚಿತ್ರ ತೋರಿಸಿ ಅವರನ್ನು ಗುರುತಿಸುವುದು. |

| | | | | |
|---|---|---|---|---|
| ೩ | ಆಗಸ್ಟ್ ೨ನೇ ವಾರ | **ಕನ್ನಡಮ್ಮನ ಹರಕೆ(ಪದ್ಯ)**<br>ಮುಖ್ಯ ಸಾಮರ್ಥ್ಯ;-<br><br>*ಕಂಠಪಾಠ ಮಾಡಿದ ಪದ್ಯವನ್ನು ತಮ್ಮದೇ ರಾಗದಲ್ಲಿ ಹಾಡುವ ಸಾಮರ್ಥ್ಯ ಗಳಿಸುವರು.<br><br>*ಕನ್ನಡಮ್ಮನ ಹರಕೆ ಪದ್ಯವನು ತಮ್ಮದೇ ರಾಗದಲ್ಲಿ ಹಾಡುವರು ಹಾಗೂ ಇಷ್ಟವಾದ ಸಾಲನ್ನು ಗುರುತಿಸುವರು. | *ಶಿಕ್ಷಕರಿಂದ ಪದ್ಯದ ಮಾದರಿ ವಾಚನ/ಗಾಯನ.<br>*ಮಕ್ಕಳಿಂದ ಪದ್ಯವನ್ನು ಹಾಡಿಸುವರು.<br><br>*ವಿಡಿಯೋ/ಆಡಿಯೋ ಮೂಲಕ ಪದ್ಯ ಕೇಳಿಸುವುದು.<br><br>*ಧ್ವನಿ ಸುರುಳಿಯ ಪದ್ಯವನ್ನು ಆಲಿಸುವರು ಮತ್ತು ಮೆಚ್ಚುವರು.<br><br>*ಹೊಸ ಪದಗಳ ಅರ್ಥ ತಿಳಿಸುವುದರೊಂದಿಗೆ ಪದ್ಯದ ಸರಳ ವಿವರಣೆ ನೀಡುವರು.<br><br>*ಸ್ವರ ಹಾಗೂ ವ್ಯಂಜನ ಅಕ್ಷರ ಬಳಕೆಯಿಂದ ಅರ್ಥ ವ್ಯತ್ಯಾಸವಾಗುವುದನ್ನು ತಿಳಿಸುವುದು.<br>ಉದಾ;- ಹಾಲು-ಆಲು<br><br>*ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಮಾಡಿಸಿ ತರಗತಿಯಲ್ಲಿ ಹಾಡಿಸುವುದು.<br><br>**ಟಿಪ್ಪಣಿ:**-ವೆಬ್‌ಸೈಟ್ ನಲ್ಲಿ ಈ ಪದಗಳಿಗೆ ನೀಡಿದ ಚಿತ್ರಗಳನ್ನು ಬಳಸಿ ಅರ್ಥೈಸುವುದು.<br>ಉದಾ :- ಇಹಪರ, ದಮ್ಮಯ್ಯ. | *ಪದ್ಯದ ಪ್ರಾಸಪದ ಗುರುತಿಸುವುದು.<br>ಸುಮೇರು (೪ನೇ ತರಗತಿ)<br>ಅಭ್ಯಾಸ ಹಾಳೆ ಪುಟ ಸಂಖ್ಯೆ ೩೩ ನ್ನು ಬಳಸುವುದು.<br><br>*ಸಜಾತಿ-ವಿಜಾತಿ ಒತ್ತಕ್ಷರ ಸಂಗ್ರಹಿಸುವುದು.<br><br>*ಕೊಟ್ಟಿರುವ ಪದಗಳಲ್ಲಿ ಬರಹದ ಸರಿಯಾದ ರೂಪವನ್ನು ಬರೆಸುವುದು.(ಪಠ್ಯಪುಸ್ತಕದ ಭಾಷಾ ಚಟುವಟಿಕೆ)<br><br>*ಶಿಕ್ಷಕ ನಿರ್ಮಿತ ಪ್ರಶ್ನೆ/ ಅಭ್ಯಾಸದ ಪ್ರಶ್ನೆ ಬಳಸುವುದು.<br><br>*ನಾಲಗೆ ಸುರುಳಿ ವಾಕ್ಯಗಳನ್ನು ಉಚ್ಚರಿಸುವುದು. (ಅಭಾಸ ಪುಸ್ತಕ ಬಳಕೆ)<br>ಸುಮೇರು- ಪುಟ ಸಂಖ್ಯೆ ೪೦,೪೧ ಬಳಸುವುದು.<br><br>*ಪದ್ಯವನ್ನು ಪೂರ್ಣವಾಗಿ, ರಾಗವಾಗಿ ಹಾಡುವುದು.<br><br>*ಪದ್ಯದಲ್ಲಿ ಇಷ್ಟಪಡುವ ಸಾಲುಗಳನ್ನು ಬರೆಸುವುದು. |

| | | | | |
|---|---|---|---|---|
| ೪ | ಆಗಸ್ಟ್ ೩ನೇ ವಾರ | **ಬುದ್ದಿವಂತ ರಾಮ ಕೃಷ್ಣ**<br>ಮುಖ್ಯ ಸಾಮರ್ಥ್ಯ;–<br>ಮಕ್ಕಳ ನಿಯತಕಾಲಿಕೆಯನ್ನು ಓದಿ ಅರ್ಥೈಸಿಕೊಳ್ಳುವರು.<br><br>*ಬುದ್ದಿವಂತ ರಾಮಕೃಷ್ಣ ಪಾಠವನ್ನು ಓದಿ ಅರ್ಥೈಸಿಕೊಂಡು ತಮಗೆ ಮೆಚ್ಚುಗೆಯಾದ ಪಾತ್ರ/ಸನ್ನೀವೇಶ/ಘಟನೆಯನ್ನು ವಿವರಿಸುವರು. | *ತೆನಾಲಿ ರಾಮಕೃಷ್ಣನ ಕತೆಗಳು ಹಾಗೂ ಬೀರಬಲ್ ನ ಚತುರತೆಗೆ ಸಂಬಂಧಿಸಿದ ಕತೆಯ ವೀಡಿಯೋ ತೋರಿಸುವುದು.<br><br>*ಶಿಕ್ಷಕರಿಂದ ಮಾದರಿ ವಾಚನ.<br>ಧ್ವನಿಸುರುಳಿ/ಯೂ–ಟ್ಯೂಬ್ ಪಾಠಗಳನ್ನು ಬಳಸುವುದು.<br><br>*ಮಕ್ಕಳಿಂದ ವಾಚನ ಮಾಡಿಸುವುದು.<br><br>*ಮಕ್ಕಳಿಗೆ ಇಷ್ಟವಾದ ಘಟನೆ/ಸನ್ನಿವೇಶವನ್ನು ಹೇಳಿಸುವುದು. | ತೆನಾಲಿರಾಮ, ಬೀರಬಲ್ ನ ಚಿಕ್ಕ ಕಥಾಪುಸ್ತಕ ನೀಡುವುದು.<br><br>*ಹೇಳಿಕೆಗಳನ್ನು ಯಾರು ,ಯಾರಿಗೆ ಹೇಳಿದರು ?<br>ಪಠ್ಯಪುಸ್ತಕದ ಅಭ್ಯಾಸದ ಪ್ರಶ್ನೆಗಳನ್ನು ಬಳಸುವುದು. |
| ೫ | ಆಗಸ್ಟ್ ೪ನೇ ವಾರ | ಪದಗಳ ಅರ್ಥ ತಿಳಿಯುವರು.<br><br>ವ್ಯಾಕರಣಾಂಶ ಪರಿಚಯ:–<br><br>ಪತ್ರಿಕೆಯಲ್ಲಿ ಬರುವ ಮಕ್ಕಳ ವಿಭಾಗದಿಂದ ಕತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಓದುವರು. | 'ತಿಲಕಾಷ್ಠಮಹಿಷಬಂಧನ' ಪದವನ್ನು ಬಿಡಿಸುವರು ಮತ್ತು ಅರ್ಥೈಸುವರು.<br><br>*ಪಾಠದ ಸರಳ ವಿವರಣೆ ನೀಡುವುದು.<br><br>*ಕೆಲವು ವಾಕ್ಯಗಳನ್ನು ಕೊಟ್ಟು ಸರಿಪಡಿಸಿ ಬರೆಯಲು ಪ್ರೋತ್ಸಾಹಿಸುವುದು.<br>ಉದಾ;– ನಾವು ಶಾಲೆಗೆ ಹೋಗುತ್ತೇನೆ.<br>ನಾನು ಶಾಲೆಗೆ ಹೋಗುತ್ತೇನೆ.<br><br>*ನಿಯತಕಾಲಿಕೆಯಿಂದ ಮಕ್ಕಳ ಕತೆ,ಕವನ ಸಂಗ್ರಹಿಸಲು ಪ್ರೇರೇಪಿಸುವುದು. | ಮಾದರಿಯಂತೆ ಕೂಡಿಸಿ ಬರೆಯಿರಿ.<br>ಉದಾ;– ಎಮ್ಮೆ + ಗಳು = ಎಮ್ಮೆಗಳು<br>ಸುಮೇರು– ಪುಟ ಸಂಖ್ಯೆ ೪೫ ರ ಅಭ್ಯಾಸ ಹಾಳೆ ಬಳಸುವುದು.<br><br>*ಪಠ್ಯಪುಸ್ತಕದ ಭಾಷಾಭ್ಯಾಸದಲ್ಲಿ ನೀಡಿರುವ ಪ್ರಶ್ನೆಗಳನ್ನು ಬಳಸುವುದು.<br><br>*ನಿಯತಕಾಲಿಕೆಯಿಂದಕತೆ, ಕವನ ಸಂಗ್ರಹಿಸಿ ಓದುವುದು. |

| ಮೊದಲನೇ ರೂಪಣಾತ್ಮಕ ಪರೀಕ್ಷೆ | ಸಿ.ಸಿ.ಇ ಅಡಿಯಲ್ಲಿ ನೀಡಬಹುದಾದ ಚಟುವಟಿಕೆಗಳು |
|---|---|
| ಶಿಕ್ಷಕರು ಮಕ್ಕಳಿಗೆ ಯೋಜನೆಯನ್ನು ನೀಡುವರು. | • ಗ್ರಾಮ್ಯವಾಗಿ ಇರುವ ಲಾಲಿಹಾಡು, ಜನಪದ ಗೀತೆಗಳನ್ನು ಸಂಗ್ರಹಿಸುವುದು.<br>• ಕನ್ನಡನಾಡು–ನುಡಿಗೆ ಸಂಬಂಧಿಸಿದ ಪದ್ಯಗಳನ್ನು ಸಂಗ್ರಹಿಸುವುದು.<br>• ಕನ್ನಡ ಕವಿಗಳ ಭಾವಚಿತ್ರ ಸಂಗ್ರಹಿಸಿ 'ಭಾವಕೋಶ' ತಯಾರಿಸುವುದು.<br>• ನಿಯತಕಾಲಿಕೆಯಲ್ಲಿನ ಮಕ್ಕಳ ಕತೆ ಕವನ ಸಂಗ್ರಹಿಸಿ ಪುಸ್ತಕ ತಯಾರಿಸುವುದು.<br>• ತೆನಾಲಿ ರಾಮಕೃಷ್ಣ ಹಾಗೂ ಬೀರಬಲ್‌ನ ಬುದ್ಧಿವಂತಿಕೆಗೆ ಸಂಬಂಧಿಸಿದ ಕತೆಗಳ ಸಂಗ್ರಹ. |